ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ

ಸಿಸಿ ನಂಬರ. 698/2023

ಸಿ ಡಬ್ಲ್ಯೂ- 7

ಪಿ ಡಬ್ಲ್ಯೂ-6

ದಿಃ 28-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಲಕ್ಷ್ಮಿ ದಯಾನಂದ ನಾಯ್ಕ

ತಂದೆಯ ಹೆಸರುಃ ದಯಾನಂದ ನಾಯ್ಕ

ವಯಸ್ಸುಃ 40 ವರ್ಷ

ಉದ್ಯೋಗಃ ಸ್ಟಾಫ್ ನರ್ಸ

ವಿಳಾಸಃ ಅಜ್ಜಿಕಟ್ಟಾ, ಅಂಕೋಲಾ.

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ

ಚಾಸಾ-1 ರವರು ನಮ್ಮ ಆಸ್ಪತ್ರೆಯ ಆಡಳಿತಾಧಿಕಾರಿ ಆಗಿದ್ದರು. ಚಾಸಾ-4 ರವರು ವೈದ್ಯರು ಇರುತ್ತಾರೆ. ಚಾಸಾ-5 ಮತ್ತು 6 ನಮ್ಮ ಸ್ಟಾಫ್ ನರ್ಸ ಆಗಿರುತ್ತಾರೆ. ಚಾಸಾ-8 ರಿಂದ 14 ರವರ ಪರಿಚಯ ಇರುತ್ತದೆ. ದಿಃ12-01-2019 ರಂದು ಬೆಳಿಗ್ಗೆ 11.30 ಗಂಟೆಯ ಸಮಯದಲ್ಲಿ 3 ಜನರು ಹೊಡೆದಾಟದ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಭೇಟಿ ಕೊಟ್ಟಿದ್ದು, ಅವರನ್ನು ಚಾಸಾ-4 ರವರು ಉಪಚರಿಸಿ, ಎಂ ಎಲ್ ಸಿ ಯನ್ನು ಪೊಲೀಸ್ ಠಾಣೆಗೆ ಕಳುಹಿಸಿಕೊಟ್ಟಿರುತ್ತಾರೆ. ಚಿಕಿತ್ಸೆಯನ್ನು ಪಡೆದುಕೊಳ್ಳಲು ಬಂದವರ ಹೆಸರು ನಿಖರವಾಗಿ ಹೇಳಲು ಬರುವುದಿಲ್ಲ. ಗಲಾಟೆಯಾದಾಗ ಸುಮಾರು ಮಧ್ಯಾಹ್ನ 1

ಗಂಟೆಯಾಗಿತ್ತು. ನಂತರ 5-6 ಜನರು ಬಂದಿದ್ದು, ಅವರವರ ಒಳಗಡೆ ಜಗಳವಾಗಿರುತ್ತದೆ. ಅವರು ಆಸ್ಪತ್ರೆಯ ವಸ್ತುಗಳನ್ನು ತೆಗೆದುಕೊಂಡು ಹೊಡೆದಾಡಿಕೊಂಡಿರುತ್ತಾರೆ. ಏನನ್ನು ತೆಗೆದುಕೊಂಡು ಗಲಾಟೆ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಅವರ ಕೈಯಲ್ಲಿ ಯಾವುದೇ ವಸ್ತು ಇರುವುದನ್ನು ನೋಡಿರುವುದಿಲ್ಲ, ಅವುಗಳನ್ನು ನಮ್ಮ ಆಸ್ಪತ್ರೆಯಲ್ಲಿ ಉಪಯೋಗಿಸುತ್ತಾರೆ. ಗಲಾಟೆ ನಡೆದಿದ್ದರಿಂದ ನನಗೆ ಏನೂ ತೊಂದರೆಯಾಗಿರುವುದಿಲ್ಲ. ನಾನು ಆಗ ಗರ್ಭಿಣಿ ಇದ್ದ ಕಾರಣ ಮುಂದೆ ನಿಂತುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಗುರುತಿಸುವುದಿಲ್ಲ. ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಇವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

ಪಾಟಿ ಸವಾಲುಃ ಮಾನ್ಯ ಎ.ಪಿ.ಪಿ.ಯವರಿಂದ

2. ನಿಮ್ಮ ಹತ್ತಿರ ಮೊದಲು ಚಿಕಿತ್ಸೆಗೆ ಬಂದವರು ಸುಬಾಷ್, ರೋಹಿನಿ ಮತ್ತು ಅಮರ ಆಗಿದ್ದರು ಎಂದರೆ ಸರಿಯಾಗಿ ನನಗೆ ನೆನಪಿರುವುದಿಲ್ಲ. ಆ ಸಮಯದಲ್ಲಿ ಅವರು ತಮ್ಮ ತಮ್ಮ ತಮ್ಮಲ್ಲಿ ಅವಾಚ್ಯ ಶಬ್ದಗಳಿಂದ ಬೈದಾಡಿಕೊಂಡು ಜೀವಬೆದರಿಕೆ ಹಾಕಿಕೊಂಡಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ಸದರಿ ಗಲಾಟೆಯಿಂದ ನಿಮ್ಮ ಕರ್ತವ್ಯಕ್ಕೆ ಅಡ್ಡಿಯಾಗಿರುತ್ತದೆ

ಎಂದರೆ ಸರಿಯಲ್ಲ. ನೀವು ಪೊಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-13 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳಿಂದ ನಿಮ್ಮಸಮಕ್ಷಮವೇ ಹೊಡೆದಾಡಿಕೊಂಡಿದ್ದರೂ ಸಹ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮಗೆ ಈ ಘಟನೆಯ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಹಾಗೂ ಗಲಾಟೆಯಿಂದ ನಿಮ್ಮ ಕರ್ತವ್ಯಕ್ಕೆ ಅಡ್ಡಿಯಾಗಿದ್ದರೂ ಸಹ, ಮುದ್ದೆ ಮಾಲುಗಳನ್ನು ನೋಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 2,4 ರಿಂದ 8ನೇ ಆರೋಪಿತರ ಪರ ವಕೀಲರಾದ ಶ್ರೀ ಜಿ.ವಿ.ಎನ್ ಇವರಿಂದಃ

3. ಚಾಸಾ-1 ರವರು ನಿಮ್ಮ ಹಿರಿಯ ಅಧಿಕಾರಿ ಎಂದರೆ ಸರಿ. ದಿಃ12-01-2019 ರಂದು ಚಾಸಾ-1 ರವರೇ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿ. ಅವರ ಮಾತನ್ನು ಕೇಳಿಕೊಂಡು ನೀವು ಇಂದು ಸುಳ್ಳು ಸಾಕ್ಷಿ ಹೇಳಲು ಬಂದಿರುತ್ತೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> 1 ಮತ್ತು 3ನೇ ಆರೋಪಿತರ ಪರ ವಕೀಲರಾದ ಶ್ರೀ ವಿ.ಎಸ್ .ಎನ್ ಇವರಿಂದಃ

4. ನ್ಯಾಯಾಲಯದ ಮುಂದೆ ಇರುವ ಆರೋಪಿತರ ವೈಯಕ್ತಿಕ ಪರಿಚಯವಿರುವುದಿಲ್ಲ ಎಂದರೆ ಸರಿ.

( ಮುಂದುವರೆದ ಪಾಟೀ ಸವಾಲನ್ನು ಮೇಲಿನ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿಕೊಂಡಿದ್ದು, ಅದನ್ನೇ ಅಳವಡಿಸಿಕೊಳ್ಳಲಾಯಿತು.)

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.